**Udayavani 05-06-2016**

ಮಾಹಿತಿ ಕೇಂದ್ರ ಉದ್ಘಾಟನೆ

# ಕೃಷಿಯನ್ನು ಲಾಭದಾಯಕವಾಗಿಸಿ

## ■ ಕೃಷಿಯನ್ನು ಕೈಗಾರಿಕಾ ಕ್ಷೇತ್ರದಂತೆ ಬದಲಾಯಿಸಿ ವೈಜ್ಞಾನಿಕತೆ- ತಾಂತ್ರಿಕತೆ ಅಳವಡಿಸಿ: ಡಾ| ಪ್ರಕಾಶ ಕಮ್ಮರಡಿ

**ಶಿವಮೊಗ್ಗ:** ಕೃಷಿ ಎಂಬುದು ನಷ್ಟದ ಕ್ಷೇತ್ರವಲ್ಲ, ಬದಲಾಗಿ ಇದನ್ನು ಲಾಭದಾಯಕ ಎಂದು ತೋರಿಸುವುದು ರಾಜ್ಯ ಕೃಷಿ ಬೆಲೆ ಆಯೋಗದ ಜವಾಬ್ದಾರಿಯಾಗಿದ್ದು, ಇದನ್ನು ಕಾರ್ಯರೂಪಕ್ಕೆ ತರಲು ಎಲ್ಲ ರೀತಿಯ ಯತ್ನ ನಡೆಸುತ್ತಿದೆ ಎಂದು ರಾಜ್ಯ ಕೃಷಿ ಬೆಲೆ ಆಯೋಗದ ಅಧ್ಯಕ್ಷ ಡಾ| ಟಿ.ಎನ್. ಪ್ರಕಾಶ್ ಕಮ್ಮರಡಿ ಹೇಳಿದರು.

ಇಲ್ಲಿನ ನವುಲೆಯಲ್ಲಿರುವ ಕೃಷಿ ಮತ್ತು ತೋಟಗಾರಿಕೆ ವಿಶ್ವವಿದ್ಯಾಲಯದಲ್ಲಿ ವಿವಿ ಮತ್ತು ರಾಜ್ಯ ಕೃಷಿ ಬೆಲೆ ಆಯೋಗದ ಸಂಯುಕ್ತ ಆಶ್ರಯದಲ್ಲಿ ಸ್ಥಾಪಿಸಲಾದ ಉತ್ಪಾದನಾ ವೆಚ್ಚ ಮತ್ತು ಮಾರುಕಟ್ಟೆ ಮಾಹಿತಿ ಕೇಂದ್ರ ಉದ್ಘಾಟಿಸಿ ಅವರು ಮಾತನಾಡಿದರು.

ಕೃಷಿ ಕ್ಷೇತ್ರ ಕೈಗಾರಿಕಾ ಕ್ಷೇತ್ರದಂತೆ ಬದಲಾಗಬೇಕು. ವೈಜ್ಞಾನಿಕತೆ ಮತ್ತು ತಾಂತ್ರಿಕತೆಯನ್ನು ಅಳವಡಿಸಿಕೊಳ್ಳಬೇಕು. ಯಾಂತ್ರೀಕರಣಕ್ಕೆ ಒತ್ತು ನೀಡಬೇಕು. ಒಟ್ಟಾರೆ ಕೃಷಿ ವೆಚ್ಚವನ್ನು ಕಡಿತ ಮಾಡಬೇಕು. ಆಗ ಮಾತ್ರ ಇದು ಲಾಭದಾಯಕವಾಗಲು ಸಾಧ್ಯ ಎಂದ ಅವರು ಈ ಹಿನ್ನೆಲೆಯಲ್ಲಿ ಕೃಷಿ ಯಂತ್ರಗಳನ್ನು ರೈತರು ಪರಸ್ಪರ ಹಂಚಿಕೊಂಡು ಕಾರ್ಯವೆಸಗಬೇಕು. ಇದಕ್ಕೆ ಆನ್ ಲೈನ್ ಸಂಪರ್ಕ ಜಾಲ ಸಿದ್ಧವಾಗಬೇಕು ಎಂದು ವಿಶ್ಲೇಷಿಸಿದರು.

ರೈತರ ಕೃಷಿ ಉತ್ಪನ್ನಗಳಿಗೆ ವೈಜ್ಞಾನಿಕವಾದ, ನ್ಯಾಯಯುತವಾದ ಬೆಲೆ ನಿಗದಿಪಡಿಸಿ,



ಶಿವಮೊಗ್ಗ: ಉತ್ಪಾದನಾ ವೆಚ್ಚ ಮತ್ತು ಮಾರುಕಟ್ಟೆ ಮಾಹಿತಿ ಕೇಂದ್ರವನ್ನು ರಾಜ್ಯ ಕೃಷಿ ಬೆಲೆ ಆಯೋಗದ ಅಧ್ಯಕ್ಷ ಡಾ| ಟಿ.ಎನ್.ಪ್ರಕಾಶ್ ಕಮ್ಮರಡಿ ಉದ್ಘಾಟಿಸಿದರು.

ಕಾರ್ಯರೂಪಕ್ಕೆ ತರುವುದು ಸವಾಲಿನ ಕೆಲಸವಾಗಿದೆ. ಉತ್ಪಾದನಾ ವೆಚ್ಚ ಕಂಡು ಹಿಡಿದು ರೈತರಿಗೆ ನ್ಯಾಯಯುತ ಬೆಲೆ ಕೊಡಿಸುವುದು ಕೂಡ ಸವಾಲಿನ ಕೆಲಸ ಎಂದು ಹೇಳಿದರು.

ಇಂದು ಕೇಂದ್ರ ಸರ್ಕಾರ 17 ಬೆಳೆಗಳಿಗೆ ಬೆಂಬಲ ಬೆಲೆ ಘೋಷಿಸಿದೆ. ಈ 17 ಬೆಳೆಗಳ ಉತ್ಪಾದನಾ ವೆಚ್ಚವನ್ನು ಆಯೋಗ ಕಳೆದ ವರ್ಷ ಸಿದ್ಧಪಡಿಸಿದ್ದು ಇದಕ್ಕೆ ಹೋಲಿಸಿದರೆ ಕೇಂದ್ರ ನೀಡುತ್ತಿರುವ ಸುಮಾರು 8-10 ಬೆಳೆಗಳ ಬೆಂಬಲ ಬೆಲೆ ಉತ್ಪಾದನಾ ವೆಚ್ಚಕ್ಕಿಂತ ಕಡಿಮೆಯಿದೆ. ಇದು ಹೋಗಬೇಕು ಎಂದ ಅವರು ಈ ಬಾರಿ 31 ಬೆಳೆಗಳ ಉತ್ಪಾದನಾ ವೆಚ್ಚವನ್ನು ಸಿದ್ಧಪಡಿಸಲಾಗುತ್ತಿದೆ ಎಂದು ಹೇಳಿದರು.

ಈ ಎಲ್ಲಾ ಪ್ರಕ್ರಿಯೆಗಳ ನಂತರವೂ ನಿಗದಿಪಡಿಸಲಾದ ಬೆಲೆ ಲಾಭದಾಯಕವಾಗಿಲ್ಲ. ಕೆಲವು ಬೆಳೆಗಳಿಗೆ ಮಾತ್ರ ಬೆಂಬಲಬೆಲೆ ಘೋಷಿಸಲಾಗುತ್ತಿದೆ. ಬೆಂಬಲ ಬೆಲೆ ಅನೇಕ ಕೃಷಿ ಉತ್ಪನ್ನಗಳಿಗೆ ಸಿಗುವುದೇ ಇಲ್ಲ. ಈ ವ್ಯವಸ್ಥೆ ಇನ್ನಷ್ಟು ಸುಧಾರಣೆಗೊಳ್ಳಬೇಕು ಎಂದರು.

ಸಮಾರಂಭದಲ್ಲಿ ಉಪಸ್ಥಿತರಿದ್ದ ಬೆಲೆ ಆಯೋಗದ ರೈತ ಪ್ರತಿನಿಧಿ ಹನುಮನಗೌಡ ಬೆಳಗುರ್ಕಿ ಮಾತನಾಡಿ, ಪ್ರಸ್ತಾವದ ನೆಲೆಗಟ್ಟಿನಲ್ಲಿ ಕೃಷಿ ಚಟುವಟಿಕೆಗಳ ಬಗ್ಗೆ ಚರ್ಚೆಗಳು ನಡೆಯಬೇಕು. ಕೃಷಿ ಕ್ಷೇತ್ರ ಇನ್ನಷ್ಟು ಯುವಜನತೆಯನ್ನು ಆಕರ್ಷಿಸುವಂತಾಗಬೇಕು. ಯುವಜನತೆ ಈ ಕ್ಷೇತ್ರಕ್ಕೆ ಬರಬೇಕೆಂದರೆ ಇಲ್ಲಿ ಲಾಭ ಬರುವಂತಾಗಬೇಕು ಎಂದರು. ಈ ಸಂದರ್ಭದಲ್ಲಿ ಆಯೋಗದ ವತಿಯಿಂದ ಪ್ರಕಟಿಸಲಾದ ಯಂತ್ರ ಬಳಕೆ, ವೆಚ್ಚ ಇಳಿಕೆ ಮಳೆಯಾಶ್ರಿತ ಮತ್ತು ನೀರಾವರಿ ಭತ್ತದ ಬೇಸಾಯದಲ್ಲಿ ಯಾಂತ್ರೀಕರಣದ ಲಾಭದಾಯಕತೆ ಎಂಬ ಎರಡು ಮಡಿಕೆ ಪತ್ರಗಳನ್ನು ಬಿಡುಗಡೆಗೊಳಿಸಲಾಯಿತು.

ಕಾರ್ಯಕ್ರಮದಲ್ಲಿ ವಿವಿಯ ಡಾ| ಎಂ.ಕೆ.ನಾಯ್ಕ ಮತ್ತು ಡಾ| ಟಿ.ಎಚ್. ಗೌಡ, ವ್ಯವಸ್ಥಾಪಕ ಉಪಾಧ್ಯಕ್ಷ ಸುಬ್ರಹ್ಮಣ್ಯ ಯಡಗೆರೆ, ಪ್ರಗತಿಪರ ಕೃಷಿಕರಾದ ಆಶಾ ಶೇಷಾದ್ರಿ, ಜಿಲ್ಲಾ ಕೃಷಿ ಇಲಾಖೆಯ ಉಪ ನಿರ್ದೇಶಕ ಡಾ| ಕೆ.ಮಧುಸೂದನ್, ಜಿಲ್ಲಾ ತೋಟಗಾರಿಕಾ ಇಲಾಖೆಯ ಉಪ ನಿರ್ದೇಶಕ ಡಾ| ಎಂ.ವಿಶ್ವನಾಥ್ ಇದ್ದರು. ಸಹಾಯಕ ಪ್ರಾಧ್ಯಾಪಕ ವೈ.ಎಸ್. ರಮೇಶ್ ಸ್ವಾಗತಿಸಿದರು.

ಕೃಷಿ ಕ್ಷೇತ್ರದ ಉತ್ಪಾದನಾ ವೆಚ್ಚ ತಾಂತ್ರಿಕತೆ, ಮಾರುಕಟ್ಟೆ ಮಾಹಿತಿ ಸೇರಿದಂತೆ ರೈತರಿಗೆ ಕೃಷಿಯ ವಿವಿಧ ಮಾಹಿತಿ ನೀಡುವ ದೃಷ್ಟಿಯಿಂದ ಇಲ್ಲಿನ ಕೃಷಿ ಕೇಂದ್ರದಲ್ಲಿ ರಾಜ್ಯ ಕೃಷಿ ಬೆಲೆ ಆಯೋಗ ರೂಪಿಸಿರುವ ಉತ್ಪಾದನಾ ವೆಚ್ಚ ಮತ್ತು ಮಾರುಕಟ್ಟೆ ಮಾಹಿತಿ ಕೇಂದ್ರವನ್ನು ಆರಂಭಿಸಲಾಯಿತು.
ರೈತರು ಈ ವಿಷಯಕ್ಕೆ ಸಂಬಂಧಿಸಿದಂತೆ ದೂರದ ಬೆಂಗಳೂರಿಗೆ ಬರುವ ಬದಲು ಸ್ಥಳೀಯವಾಗಿ ಇಲ್ಲಿಯೇ ಇದನ್ನು ಪಡೆದುಕೊಳ್ಳಬಹುದು. ಈ ಕೇಂದ್ರದ ಆರಂಭದಿಂದ ವಿವಿ ವ್ಯಾಪ್ತಿಯ ರೈತರಿಗೆ ಬೀಜ, ಗೊಬ್ಬರ, ಕೃಷಿ ಮಾಹಿತಿ, ವೆಚ್ಚ ಮತ್ತು ಮಾರುಕಟ್ಟೆಗಳ ಕುರಿತು ಅಧಿಕೃತವಾಗಿ ವಿಸ್ತೃತ ಮಾಹಿತಿ, ಉತ್ಪಾದನಾ ವೆಚ್ಚದ ಲೆಕ್ಕಾಚಾರ, ಮಾರುಕಟ್ಟೆಯ ವಿವರಗಳು ದೊರೆಯಲಿದೆ. ಈ ಕೇಂದ್ರಕ್ಕೆ ಆಯೋಗವು ಇಬ್ಬರು ತಾಂತ್ರಿಕ ಸಿಬಂದಿ ಮತ್ತು ಮೂಲ ಸೌಕರ್ಯವನ್ನು ಒದಗಿಸಿದೆ. ಇವರಿಗೆ ತರಬೇತಿ ನೀಡಲಾಗಿದ್ದು, ಇವರು ಈ ವಿವಿ ವ್ಯಾಪ್ತಿಯಲ್ಲಿ ವಿವಿಧ ಕೃಷಿ ಬೆಳೆಯ ಉತ್ಪಾದನಾ ವೆಚ್ಚವನ್ನು ವೈಜ್ಞಾನಿಕವಾಗಿ ಲೆಕ್ಕ ಹಾಕಲಿದ್ದಾರೆ. ಈ ಮಾಹಿತಿಯನ್ನು ಆಧರಿಸಿಯೇ ಬೆಲೆ ಆಯೋಗ ತನ್ನ ವರದಿ ಸಿದ್ಧಪಡಿಸಲಿದೆ. ಇಲ್ಲಿನ ಕೇಂದ್ರದ ಮುಖ್ಯಸ್ಥರಾಗಿ ಸಹಾಯಕ ಪ್ರಾಧ್ಯಾಪಕ ವೈ. ಎಸ್. ರಮೇಶ್ ಕಾರ್ಯನಿರ್ವಹಿಸಲಿದ್ದಾರೆ.